ಹೆದ್ದರಿಗಳಲ್ಲಿ ತನಿಖಾ ರಾಣೆಗಳನ್ನು ನಿರ್ಮಿಸಿ ಸಾರಿಗೆ ಇಲಾಖೆ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಪೊಲೀಸ್ ಇಲಾಖೆ ಮತ್ತು ಲೋಕೋಪಯೋಗಿ ಇಲಾಖೆಗಳು ಅಧಿಕ ಭಾರವಿರುವ ವಾಹನಗಳು ಬರುವಲ್ಲಿ ಕರಿಣ ಕ್ರಮಗಳನ್ನು ತೆಗೆದುಕೊಳ್ಳಲು ತಿಳಿಸಲಾಯಿತು ಈ ರಸ್ತೆಗಳಲ್ಲಿ ಬರುವ ಸೇತುವೆಗಳ ಮುಂದೆ ನಿಗದಿತ ಭಾರಕ್ಕಿಂತ ಅಧಿಕ ಭಾರವಿರುವ ವಾಹನಗಳು ಚಲಿಸದಂತೆ ನಾಮಫಲಕಗಳನ್ನು ನಿರ್ಮಿಸುವುದು ಇಂತಹ ರಸ್ತೆಗಳಲ್ಲಿ ಬರುವ ವಾಹನಗಳು ಮತ್ತು ಹೋಗುವ ವಾಹನಗಳಿಗೆ ರಸ್ತೆಯ ಎರಡು ಬದಿಯಲ್ಲೂ ಇಂತಹ ವಾಹನಗಳು ಚಲಿಸಲು ತಕ್ಕಂತಹ ರಸ್ತೆಗಳನ್ನು ನಿರ್ಮಿಸುವುದು, ರಸ್ತೆಗಳಲ್ಲಿ ಅಧಿಕ ಭಾರದ ಖನಿಜವನ್ನು ಅನ್‌ಲೋಡ್ ಮಾಡಿಸಲು ಅಲ್ಲಿಂದಲ್ಲಿ ಸ್ಟಾಕ್ ಯಾರ್ಡ್‌ಗಳನ್ನು ನಿರ್ಮಿಸುವುದು ಮುಂತಾದ ಯೋಜನೆಗಳನ್ನು ಕೈಗೊಂಡು ಅಧಿಕ ಭಾರವನ್ನು ನಿಯಂತ್ರಿಸಲು ತೀರ್ಮಾನಿಸಲಾಯಿತು

ಈ ಬಗ್ಗೆ ಸಾರ್ವಜನಿಕರಿಂದ ದೂರು ಸಂಗ್ರಹಿಸಿ, ತಕ್ಷಣ ಕ್ರಮ ತೆಗೆದುಕೊಳ್ಳಲು ಹೆಲ್ಪ್‌ಲೈನ್‌ಗಳನ್ನು ಕೇಂದ್ರ ಕಛೇರಿಯಲ್ಲಿ ಹಾಗೂ ಜಿಲ್ಲಾ ಕಛೇರಿಗಳಲ್ಲಿ ತೆರೆಯಲಾಗಿದೆ ಹಾಗೂ ರಸ್ತೆಗಳಲ್ಲಿ ಇಲಾಖೆಯ ತನಿಖಾ ದಳದಿಂದ ರಾತ್ರಿ ಪಹರೆಯನ್ನು ಮಾಡಲಾಗುತ್ತಿದೆ

ಹೆಚ್ಚು ಭಾರ ಹೊತ್ತು ಬರುವ ವಾಹನಗಳನ್ನು ತನಿಖಾ ರಾಣೆಗಳಲ್ಲಿ ತನಿಖೆ ಮಾಡಿ ಅಂತಹ ವಾಹನಗಳಿಗೆ ಅದಿರು ನೀಡಿದ ಗಣಿ ಮಾಲಿಕರಿಂದ ಖನಿಜದ ಬೆಲೆ ಮತ್ತು ರಾಜಧನ ಇವುಗಳನ್ನು ವಸೂಲಿ ಮಾಡಲು ಇಲಾಖಾ ಜಿಲ್ಲಾ ಕಛೇರಿಗಳಿಗೆ ತಿಳಿಸಲಾಗುತ್ತಿದ್ದು, ಮುಂದಿನ ಪರವಾನಿಗೆ ನೀಡುವ ಮೊದಲು ಈ ಹಣವನ್ನು ಗಣಿಗುತ್ತಿಗೆದಾರರಿಂದ ವಸೂಲಿ ಮಾಡಲಾಗುತ್ತಿದೆ ಇದರಿಂದ ಹೆಚ್ಚು ಅದಿರು ತುಂಬಿ ಬರುವ ವಾಹನಗಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿದೆ

368 (313) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ (ಬಹ್ಮಾವರ) ಮಾನ್ಯ ಸಹಕಾರ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೃಷಿ ಸಾಲದ ಮೇಲಿನ ಬಡ್ಡಿಯನ್ನು ಮನ್ನಾ ಮಾಡಿರುವುದರಿಂದ ಪ್ರಾಮಾಣಿಕವಾಗಿ ಸಾಲ ಮತ್ತು ಬಡ್ಡಿಯನ್ನು ಮರುಪಾವತಿ ಮಾಡಿದ ರೈತರಿಗೆ ಮರುಪಾವತಿ ಮಾಡಿದ ಬಡ್ಡಿಯನ್ನು ಹಿಂದಿರುಗಿಸುವ ಅಥವಾ ಮುಂದಿನ ಸಾಲಕ್ಕೆ ಹೊಂದಾಣಿಕೆ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಶ್ರೀ ಜಿ ಟಿ ದೇವೇಗೌಡ (ಸಹಕಾರ ಸಚಿವರು) .

ಅ) ಪ್ರಸ್ತಾವವು ಸರ್ಕಾರದ ಮುಂದಿರುವುದಿಲ್ಲ